ಇತ್ಯಾದಿ ಒಳಧಾರೆಗಳನ್ನು ಕಥೆಗಳ ಅಂತರಂಗಕ್ಕೆ ತರುವ ಹಾದಿಯನ್ನು ಆರಿಸಿಕೊಂಡಿದ್ದಾರೆ. ಹೀಗೆ ಆರಿಸಿಕೊಳ್ಳುವಾಗ 'ಸದ್ಯದ' ಹಂಗುಗಳು ಇವರನ್ನು ಕಾಡದೇ ಬಿಡುವುದಿಲ್ಲ. ಹಾಗಾಗಿಯೇ 'ತುರಂಗ ಬಾಲೆ'ಯಂಥ ಕಥೆ ಲಂಗು ಲಾಗಾಮಿಲ್ಲದೇ ಸಾಗುತ್ತದೆ. ಅಲ್ಲಿ ಅನುಭವ ಮತ್ತು ತತ್ವಗಳು ಕೇಂದ್ರಕ್ಕೆ ಬರುವುದೇ ಇಲ್ಲ. ಗೋವಿಂದರಾಜು ಎದುರಿಸುವ ಸಮಸ್ಯೆಯನ್ನೇ ಇವರು ಎದುರಿಸಿದ್ದಾರೆ. ನಿಜವಾದ ಮೌಖಿಕ ಲಯಗಳು ತಕ್ಕಮಟ್ಟಿಗೆ ಕಾಣುವುದು 'ತಲೆದಿಂಬುಗಳು', 'ಮೊಡಚಿಗಳು' ರೀತಿಯ ಕಥೆಗಳಲ್ಲಿ. ತಮಗೆ ದಕ್ಕಿರುವ ಭಾಷಿಕ ವಿನ್ಯಾಸಗಳನ್ನು ಸರಿಯಾಗಿ ಬಳಸಿರುವ ಸಂಗನಗೌಡ, ಮೊಡಚಿಗಳಂಥ ಕಥೆಗಳಲ್ಲಿ ಏಕಕಾಲಕ್ಕೆ ಸಮುದಾಯಗಳ ಸದ್ಯದ ಅಂತರಂಗಗಳನ್ನೂ, ಸಂಘರ್ಷಗಳ ಒಳದಾರಿಗಳನ್ನು ಅಭಿವ್ಯಕ್ತಿಸಬಲ್ಲರು. 'ಗಾಯದಬೆನ್ನು' ಮತ್ತು 'ತಲೆದಿಂಬುಗಳು' ಕಥೆಗಳು ಗ್ರಾಮೀಣ ಬದುಕಿನ ಹೊಸ ಚಿತ್ರಗಳನ್ನು ತರಲು ಯತ್ನಿಸಿ ಮತ್ತೆ ಹಳೆಯ ದಾರಿಯನ್ನು ಹಿಡಿಯುತ್ತವೆ. ಗ್ರಾಮವನ್ನು ತೀರಾ ಹೊಸ ದೃಷ್ಟಿಕೋನದಲ್ಲಿ ಕಾಣುವ ಪಾತ್ರಗಳು ಇವರಲ್ಲಿ ಇನ್ನೂ ಬರುವ ಸೂಚನೆಗಳಿವೆ. ಕಥೆಯ ಒಳಗೆ ಬರುವ ಹೆಚ್ಚಿನ ಮಾತುಕತೆಗಳು ಗಟ್ಟಿಯಾದ ಕಥಾರಚನೆಯನ್ನು ಕೆಡವಬಲ್ಲವು ಎಂಬುದನ್ನು ಈ ಕಥೆಗಾರ ತಿಳಿಯಬೇಕು. ಯಾವುದೇ ಕಥೆ ತನ್ನ 'ಸಹಜತೆ'ಯಲ್ಲಿಯೇ ಲೋಕವನ್ನು ಕಾಣಬೇಕೇ ಹೊರತು ಬೌದ್ಧಿಕ ಕಸರತ್ತಿನಿಂದಲ್ಲ ಎಂಬುದನ್ನು ಅರಿಯಬೇಕು. ಇವರಿಗೆ ಸಹಜವಾಗಿಯೇ ದಕ್ಕಿರುವ ಮಣ್ಣಿನ ಕಸುವಿನ ಅರಿವು ಹಾಗೂ ಮುಗ್ಧತೆಯನ್ನು ಬಹಳಷ್ಟು ಕಾಲ ಉಳಿಸಿಕೊಂಡರೆ ಮಾತ್ರ ಕಥೆಗಾರರಾಗಿ ಉಳಿಯಬಹುದು, ಇಲ್ಲದಿದ್ದರೆ ಕಷ್ಟ.

ದಲಿತ ಬದುಕಿನ ಸುಡುವ ಸತ್ಯಗಳನ್ನೇ ವಸ್ತುವನ್ನಾಗಿ ಮಾಡಿಕೊಂಡು ಕಥೆ ಮಾಡುತ್ತಿರುವ ವಿಕಾಸ್ ಮೌರ್ಯ ಅವರು ಅವೇ ಕಥೆಗಳನ್ನು ಕಲಾತ್ಮಕಗೊಳಿಸುವಲ್ಲಿ ಹಾದಿತಪ್ಪುತ್ತಾರೆ. ಇವರ ಕಥೆಗಳಲ್ಲಿ ಮಾರಮ್ಮ ಮತ್ತು ಅಂಬೇಡ್ಕರ್ ಸದ್ಯದ ತಲ್ಲಣಗಳಿಗೆ ವಿಶಿಷ್ಟ ಶಕ್ತಿ ತುಂಬುತ್ತಾರೆ. 'ಚಿನ್ನದ ಕನ್ನಡಕ' ಕಥೆಯಲ್ಲಿ ಸಂಘಟನೆ ಇದ್ದರೆ ಶಿಕ್ಷಣವಿಲ್ಲ, ಶಿಕ್ಷಣವಿದ್ದರೂ ಸಂಘಟನೆಯ ವಿಫಲತೆಗಳನ್ನು ಸೂಚ್ಯವಾಗಿ ಕಾಣಬಹುದು. ಈ ಕಥೆಗೆ ದಲಿತ ಬದುಕಿನ ಮುಗ್ಧಲೋಕವನ್ನು ಹೇಳುತ್ತಲೇ, ಬಿರುಕುಗಳನ್ನು ಅಭಿವ್ಯಕ್ತಿಸುವ ಉಮೇದು ಇದೆ. ಇಲ್ಲೆಲ್ಲಾ ಜಾತಿ ಅಳಿಸಲಾಗದ ಲಿಪಿಯಾಗಿದೆ. ನೀಲವ್ವನಂಥ ಪಾತ್ರ ಕಾಡುವುದು ತನ್ನ ನಿಶ್ಚಲ ದೇಹದಿಂದ ಮಾತ್ರವಲ್ಲ, ಆಕೆ ಅರ್ಥಮಾಡಿಕೊಂಡಿರುವ 'ಹೆಣ್ಣಿನ ಆಳವಾದ ಅನುರಾಗದ' ಹಾದಿಯ ಮೂಲಕ. ಒಂದು ರೀತಿಯಲ್ಲಿ ನೀಲವ್ವ ದಲಿತತತ್ವದ ಶಕ್ತಿಯನ್ನೂ, ಮೇಲು ಜಾತಿಗಳ ಕ್ರೌರ್ಯವನ್ನು ಸೂಕ್ಷ್ಮವಾಗಿ ತಿಳಿಸುತ್ತಾಳೆ. ಇವರ 'ತಲೆತಲಾಂತರ' ಕಥೆ ಭಿನ್ನವಾದ ಮೌಖಿಕ ತಂತ್ರವನ್ನು ದಕ್ಕಿಸಿಕೊಂಡಿದೆ. ಇಲ್ಲಿ ಮಾರಮ್ಮ ಜನಪದದಲ್ಲಿ ಬರುವ ಹಾಗೆ ಬ್ರಾಹ್ಮಣರ ಹೆಣ್ಣುಮಗಳಲ್ಲ, ಮಾದಿಗರ ಹುಡುಗಿ. ಹುಡುಗ ಬ್ರಾಹ್ಮಣ. ಕಥೆ ಹೇಳುವುದು ಸದ್ಯದ ಯಂಕವ್ವ. ನಮ್ಮ ಆಚಾರ ಗಣಪನದೋ? ಮಾರಮ್ಮಂದೋ? ಎಂಬ ಪ್ರಶ್ನೆಗಳು ಕಥೆಯ ಉದ್ದಕ್ಕೂ ಸಾಗುತ್ತವೆ. ವಾಚ್ಯವನ್ನು ಕಲಾತ್ಮಕಗೊಳಿಸುವ ಕುಶಲತೆ ವಿಕಾಸ್ ಅವರಿಗೆ ಇದ್ದಿದ್ದರೆ ಇದನ್ನು ಉತ್ತಮ ಕಥೆ ಮಾಡಬಹುದಿತ್ತು. ಬರೀ ಹೇಳಿಕೆಗಳು ಮತ್ತು ಮಾತುಕತೆಗಳು ಕಥೆಗಾರರಿಗೆ ಕಂಟಕವಾಗಿವೆ. ಹಾಗೆ ನೋಡಿದರೆ, ಮಾರಮ್ಮ ಮತ್ತು ಅಂಬೇಡ್ಕರ್ ದಲಿತತ್ವದ ರೂಪಕಕಗಳೇ ಆಗಿವೆ. ಈಚಿನ ದಲಿತ ಚಿತ್ರಗಳು ಯಾಕೆ ಭಿನ್ನವೆಂದರೆ, ಸತ್ಯವನ್ನು ಬೆತ್ತಲುಗೊಳಿಸುವ ಪರಿ; ಗ್ರಾಮಗಳ ಒಳರಾಜಕಾರಣದ ಬಿರುಕುಗಳು; ಆತ್ಮವಿಮರ್ಶೆಯಲ್ಲಿನ ಧೈರ್ಯ ಮತ್ತು ಮುಗ್ಧತೆ ತುಂಬಿದ ಸಹಜಜೀವನ ಕ್ರಮದಿಂದಾಗಿ. ಇಷ್ಟಿದ್ದರೂ ನಮ್ಮ ಗ್ರಾಮಗಳು ಭಿನ್ನ ಜಾತಿಗಳ ಸಂಕರವನ್ನು ದೂರ ಇಟ್ಟಿವೆ. ಗ್ರಾಮ ಮತ್ತು ನಗರಗಳ ಸೇತುವೆಗಳು ಏನೇ ಹೇಳಿದರೂ ಪ್ರಾಮಾಣಿಕ ಸಂಕರ ಒಂಟಿಯಾಗಿದೆಯೇ ಎಂಬ ಪ್ರಶ್ನೆಯೂ ಇದೆ.

'ನಾವ್ಗಳು ಮುಂದಕ್ ಬರ್ಬೇಕು ಅಂದರೆ ಓದದ್ದೊಂದೇ ದಾರಿ' ಎಂಬ ಮಾತು ಎ.ಎಸ್.ಜಿ. ಅವರ 'ಬ್ಯಾಟೆಮರ' ಕಥೆಯಲ್ಲಿ ಬರುತ್ತದೆ. ಅವರ ಒಟ್ಟು ಕಥೆಗಳ ಆಶಯ ಕೂಡ ಇದೇ ಎಂದು ಭಾವಿಸಬಹುದು. ಕಥೆಯನ್ನು 'ಹೇಳು'ವಾಗಿನ ವ್ಯವಧಾನ, ಶುದ್ಧ ಹಳ್ಳಿಜಗತ್ತಿನ ಮಾತುಗಳನ್ನೇ ಪೂರ್ಣಮಟ್ಟದಲ್ಲಿ ಬಳಸುವ ವಿಧಾನದಿಂದ ಇವರ ಕಥೆಗಳನ್ನು ಗಮನಿಸುವಂತೆ ಮಾಡಿವೆ. ನಿರೂಪಣೆಯ ನುಡಿ ಮತ್ತು ಮನುಷ್ಯರ ಮಾತುಗಳು ಇಲ್ಲಿ ಏಕತ್ರಗೊಂಡಿವೆ. ಒಂದು ಕಡೆ ಗ್ರಾಮ ಜಗತ್ತಿನ ಪ್ರೀತಿಯ ಒಳಬೇರುಗಳು ಮತ್ತೊಂದು ಕಡೆ ಅದನ್ನು ಸೀಳುವ ಜಾತಿ ಇವರ ಕಥೆಗಳನ್ನು ಆವರಿಸಿರುವ ಮತ್ತೊಂದು ಅಂಶ. 'ಬ್ಯಾಟೆಮರ'ದಂಥ ಕಥೆ ಸದ್ಯದ ತಲ್ಲಣಗಳನ್ನು ಹಿಡಿಯಲು ಯತ್ನಿಸಿದೆ. ಎರಡು ಹೆಣ್ಣು ಜೀವಗಳ ಜಾತಿಮೀರಿದ ಪ್ರೇಮ; ಸಮಾಜದಲ್ಲಿ ಜಾತಿಯನ್ನೇ ನಂಬಿಕೊಂಡ ಕ್ಷುದ್ರ ಮನುಷ್ಯರು; ಜಾತಿಯನ್ನು